

ಮದುವೆಗೆ ನಿರ್ಧರಿಸಲು ಪರಸ್ಪರ ಪ್ರೀತಿ ಹಾಗೂ ಸಮಾನ ಗುಣಗಳು ಮಾತ್ರ ಸಾಕೆ?

ಡಾ.ವಿನೋದ ಛೆಬ್ಬಿ

# 85: ಪ್ರಣಯದ ಮಾದಕತೆ

ಲೂಸಿ ಲೋಚನ ದಂಪತಿಯ ಜಗಳದ ಬಗೆಗೆ ಮಾತಾಡುತ್ತಿದ್ದೇವೆ. ಹೋದಸಲ ಜಗಳದ ಒಡಲನ್ನು ಬಗೆದು ನೋಡಿದೆವು. ಅಲ್ಲಿಂದ ಮುಂದೇನಾಯಿತು ಎಂದು ಹೇಳುತ್ತೇನೆ.

ಲೋಚನ ಲೂಸಿ ನನ್ನೆದುರು ಜಗಳವಾಡಿ ನಂತರ ವಿಮುಖರಾಗಿ ಕುಳಿತಿದ್ದರಷ್ಟೆ? ಅವರ ಮುಖಭಾವದೊಳಗೆ ಗಮನಿಸಿದರೆ ಏನೆಲ್ಲ ಅಡಗಿತ್ತು? ಹತಾಶೆ, ವ್ಯಗ್ರತೆ, ದುಃಖ...ಮತ್ತಿನ್ನೇನೋ. ಇದರ ಬಗೆಗೆ ಮಾತಾಡಬೇಕು, ಒಳಗಿರುವುದನ್ನೆಲ್ಲ ಹೊರತರಬೇಕು. ಆದರೆ ಅವರು ಸಹಕರಿಸಲು ತಯಾರಾಗಿದ್ದಾರೆಯೆ? ನೋವು ತಿನ್ನುತ್ತಿರುವವರಿಗೆ ನೋವಿನ ಬಗೆಗೆ ಮಾತಾಡಿದರೆ ನೋವು ಹೆಚ್ಚಾಗಬಹುದೇನೊ? ಹಾಗಾಗಿ ಯಾರೊಬ್ಬರನ್ನೂ ಉದ್ದೇಶಿಸದೆ ಮೆತ್ತಗಿನ ಧ್ವನಿಯಲ್ಲಿ ಕೇಳಿದೆ:

'ಈಗ ನಿಮ್ಮ ಮನಸ್ಸಿನೊಳಗೆ ಏನು ನಡೆಯುತ್ತಿದೆ, ನನ್ನ ಜೊತೆ ಹಂಚಿಕೊಳ್ಳಬಹುದಾ?'

ಇಬ್ಬರೂ ತಲೆಯೆತ್ತಿದರು. ಲೋಚನ ಬಾಯಿ ತೆರೆದ. 'ಮುಂಚೆಯೆಲ್ಲ ಎಷ್ಟು ಖುಷಿಯಾಗಿದ್ದೆವು. ಈಗ? ಸಮಸ್ಯೆಗಳನ್ನು ಬಿಟ್ಟರೆ ಏನೂ ಇಲ್ಲ ಅನ್ನುವಂತಾಗಿದೆ.' ನಿರಾಸೆಯನ್ನು ತೋಡಿಕೊಂಡು ತಣ್ಣಗಾಗಿ ಮತ್ತೆ ಒಳಸರಿದ. ಲೂಸಿಯನ್ನು ನೋಡಿದೆ. ಅವಳೂ ಅವನನ್ನು ಮರುದನಿಸುವಂತಿತ್ತು. 'ಮುಂಚೆ ಎಷ್ಟೊಂದು ಚೆನ್ನಾಗಿದ್ದೆವು. ಬದುಕೆಲ್ಲ ಹಾಗೆಯೇ ಇರಬಹುದು ಎಂದುಕೊಂಡಿದ್ದೆವು. ಈಗ ನೋಡಿದರೆ ಬರೀ ಜಗಳ' ಎಂದು, ನನಗೆಷ್ಟು ಗಾಸಿಮಾಡಿದ್ದೀಯಾ ನೋಡು ಎನ್ನುವಂತೆ ಅವನ ಕಡೆಗೆ ನೋಡಿದಳು.

ನನಗೆ ಅರ್ಥವಾಯಿತು. ಇಬ್ಬರೂ ಮುಂಚೆಯಿದ್ದ ಸಿಹಿಜೊತೆಯನ್ನು ತಲೆಯಲ್ಲಿ ಇಟ್ಟುಕೊಂಡಿದ್ದಾರೆ! ನನಗೆ ಒಳದಾರಿಯೊಂದು ಸಿಕ್ಕಿತು.

'ಲೂಸಿ, ಲೋಚನ್, ನೀವಿಬ್ಬರೂ ಪ್ರೀತಿಸಿ ಮದುವೆಯಾಗಿದ್ದು ಎಂದಿರಲ್ಲ? ನಿಮ್ಮ ಪ್ರೀತಿ ಹೇಗೆ ಶುರುವಾಯಿತು? ಪರಸ್ಪರ ಏನೇನು ಇಷ್ಟಪಟ್ಟಿರಿ? ನಿಮ್ಮ ಸಂಬಂಧ ಬೆಳೆದಿದ್ದು ಹೇಗೆ?' ಅವರು ಇತಿಹಾಸದ ನೆನಪಿಗೆ ಜಾರಿದರು.

ಲೂಸಿ ಲೋಚನ ಒಂದು ಮದುವೆಯಲ್ಲಿ ಭೇಟಿಮಾಡಿದ್ದಾರೆ. ಮೊದಲ ನೋಟದಲ್ಲೇ ಕಣ್ಸೆಳೆದಿದ್ದಾರೆ. ದೂರದ ಸಂಬಂಧಿಗಳೆಂದು ಗೊತ್ತಾಗಿ ಹತ್ತಿರವಾಗಿದ್ದಾರೆ. ಮೊಬೈಲ್ ನಂಬರ್ ವಿನಿಮಯಿಸಿಕೊಂಡಿದ್ದಾರೆ. ಬಲುಬೇಗ ಆಕರ್ಷಣೆಗೆ ಒಳಗಾಗಿದ್ದಾರೆ. ಲೋಚನನ ಸೃಜನಶೀಲತೆ, ವೈಚಾರಿಕತೆ, ಹಾಗೂ ನಾಳಿನ ಬಗೆಗೆ ತಲೆಕೆಡಿಸಿಕೊಳ್ಳದ 'ಬಿಂದಾಸ್' ಸ್ವಭಾವ ಲೂಸಿಗೆ ಹಿಡಿಸಿವೆ. ಲೂಸಿಯ ದಿಟ್ಟತನ, ಪ್ರಾಮಾಣಿಕತೆ, ಚೂಟಿತನ ಹಾಗೂ ಮಾತುಗಾರಿಕೆ ಲೋಚನನಿಗೆ ಹಿಡಿಸಿವೆ. ಇಬ್ಬರಿಗೂ ಆಸಕ್ತಿಯ ವಿಷಯಗಳೆಂದರೆ ಸಾಹಿತ್ಯಲೋಕ, ಚಲನಚಿತ್ರಗಳು, ಪ್ರವಾಸ. ಅಲ್ಲಿಂದ ಶುರುವಾಯಿತು ಪ್ರೀತಿ. ನಂತರ ಮದುವೆಗೆ ಯೋಚಿಸಿದ್ದಾರೆ.

ನಾನು ಕೇಳಿದೆ. 'ಇಂತಿಂಥ ಗುಣಸ್ವಭಾವಗಳು ಇಷ್ಟವಾದುವು ಅಂದಿರಿ. ಆದರೆ ಮದುವೆಯಾಗಬೇಕು ಎಂದು ಹೇಗೆ ನಿರ್ಧರಿಸಿದಿರಿ?' ಲೋಚನ ಗಲಿಬಿಲಿಗೊಂಡ. ಅದನ್ನು ಗ್ರಹಿಸಿ ಲೂಸಿ ಉತ್ತರ ಕೊಟ್ಟಳು. 'ಇಬ್ಬರೂ ತುಂಬಾ ಪ್ರೀತಿಸುತ್ತಿದ್ದೆವು. ಶಾರೀರಿಕವಾಗಿಯೂ ಹತ್ತಿರವಾಗಿದ್ದೆವು. ಆಗಾಗ ಕೂಡುತ್ತಿದ್ದೆವು. ಒಬ್ಬರನ್ನೊಬ್ಬರು ಬಿಟ್ಟಿರಲು ಆಗುತ್ತಿರಲಿಲ್ಲ. ಹಾಗಾಗಿ ಮದುವೆ ಆಗಲೇಬೇಕು ಅಂತ ಯೋಚಿಸಿದೆವು.'

'ನೀವಿಬ್ಬರೂ ಎಷ್ಟೊಂದು ಪ್ರೀತಿಸುತ್ತಿದ್ದಿರಿ ಅಂದರೆ, ಒಬ್ಬರನ್ನೊಬ್ಬರು ಬಿಟ್ಟಿರಲಾರದ್ದಕ್ಕೆ ಮದುವೆಯಾದಿರಿ, ಸರಿಯೆ?' ಎಂದೆ. ಇಬ್ಬರೂ ತಲೆ ಅಲ್ಲಾಡಿಸಿದರು. ಜಗಳದ ಕಾರಣ ಸ್ಪಷ್ಟವಾಗತೊಡಗಿತು. 'ಹಾಗಾದರೆ ನಿಮ್ಮೊಳಗೆ ಭಿನ್ನಾಭಿಪ್ರಾಯ ಹುಟ್ಟಿದ್ದು ಯಾವಾಗ?' ಮದುವೆಗೂ ಮುಂಚೆ ಕೆಲವೊಮ್ಮೆ ಲೋಚನ್ ಭೇಟಿಯಾಗಲು ತಡವಾಗಿ ಬರುತ್ತಿದ್ದ. ಮಾತಿಗೆ ತಪ್ಪುತ್ತಿದ್ದ. ಆಗ ಲೂಸಿ ಅಸಮಾಧಾನದಿಂದ ಮುನಿಸಿಕೊಂಡಿದ್ದು ಇದೆ. ಲೋಚನ್ ರಮಿಸಿದ್ದು ಇದೆ. ಹಾಗಾಗಿ, 'ಮದುವೆಯಾದ ನಂತರ ಸರಿಹೋಗುತ್ತಾನೆ' ಅಂದುಕೊಂಡಿದ್ದಳಂತೆ.

ಇಲ್ಲೇನು ನಡೆಯಿತು ಎಂಬುದನ್ನು ಮನೋಜೀವಶಾಸ್ತ್ರದ ದೃಷ್ಟಿಕೋನದಿಂದ ನೋಡೋಣ. ವ್ಯಕ್ತಿಗಳಿಬ್ಬರು ಆಕರ್ಷಣೆಗೆ ಒಳಗಾಗುವಾಗ ಅವರ ಮೆದುಳಿನಲ್ಲಿ ಹಲವಾರು ರಾಸಾಯನಿಕಗಳು ಉತ್ಪತ್ತಿಯಾಗುತ್ತವೆ. ಅದರಲ್ಲಿ ಪ್ರಮುಖವಾದುದು ಡೋಪಮೈನ್. ಡೋಪಮೈನ್ ನಮ್ಮ ತನುಮನಗಳಲ್ಲಿ ಅದ್ಭುತ ಮಾರ್ಪಾಡುಗಳನ್ನು ತರುತ್ತದೆ. ಏಕಾಗ್ರ ಚಿತ್ತ ಹುಟ್ಟಿಸಿ ಪ್ರೇಮಿಯ ಅತಿಚಿಕ್ಕ ಅಂಶಗಳ ಕಡೆಗೂ ಗಮನ ಹರಿಸುತ್ತದೆ. ಸದಾ ಪ್ರೇಮಿಯದೇ ಧ್ಯಾನವನ್ನು ತರುತ್ತ ಉಳಿದಂತೆ ಅನ್ಯಮನಸ್ಕತೆ ಹುಟ್ಟಿಸುತ್ತದೆ. ಪ್ರೇಮಿಯ ಹುಡುಕಾಟಕ್ಕೆ ಶರೀರದಲ್ಲಿ ಚೈತನ್ಯ ಹರಿಸಿ ಕುಣಿಸುತ್ತ ಮಿಲನಕ್ಕೆ ಸ್ಫೂರ್ತಿ ಉಕ್ಕಿಸುತ್ತದೆ. ಪ್ರೇಮಿಯ ಅಲ್ಪ ಸ್ಪಂದನೆಗೂ ಅದ್ಭುತ ಭಾವಪರವಶತೆಯಲ್ಲಿ ಮುಳುಗಿಸುತ್ತದೆ. (ಮೊಟ್ಟಮೊದಲ ಸಲ 'ಐ ಲವ್ ಯೂ' ಎಂದು ಹೇಳಿಸಿಕೊಂಡಿದ್ದು ನೆನಪಿಸಿಕೊಂಡರೆ ಈಗಲೂ ನವೋಲ್ಲಾಸ ಹುಟ್ಟುತ್ತದಲ್ಲ?) ಪ್ರೇಮಿಯ ಗುಣಗಳನ್ನು ಅತಿಯಾಗಿ ಮೆಚ್ಚುವುದು, ಪ್ರೇಮಿಗಾಗಿ ಕಾತರದಿಂದ ಕಾಯುವುದು, ಪ್ರೇಮಿಯ ಸಾನ್ನಿಧ್ಯದಲ್ಲಿ ಮೈಮರೆಯುವುದು... ಹೀಗೆ ಡೋಪಮೈನ್ ಪ್ರೇಮಿಗಳನ್ನು ಭಾವೋತ್ಕರ್ಷದಲ್ಲಿ ಬಂಧಿಸುತ್ತದೆ. ಈ ಬಂಧನವು ಮುಂದೆ ಜೋಡಿಬಾಳಿನ ಏರುಪೇರುಗಳನ್ನು ಎದುರಿಸುವಾಗ ಬಾಂಧವ್ಯ ಮುರಿಯದಂತೆ ಕಾಪಾಡುತ್ತದೆ.

ಡೋಪಮೈನ್‌ಗೆ ಅದ್ಭುತ ಗುಣಗಳಿರುವಂತೆ ಅವಗುಣಗಳೂ ಇವೆ.

ಪ್ರಣಯಭಾವದಲ್ಲಿ ಮುಳುಗಿರುವಾಗ ಸಂಗಾತಿಯ ಬಗೆಗೆ ಆಕರ್ಷಣೆಯೇ ತುಂಬಿಕೊಂಡಿರುವುದರಿಂದ ಸಂಗಾತಿಯ ದೋಷಗಳು ಕಣ್ಣಿಗೆ ಬೀಳುವುದಿಲ್ಲ. ಮಿಲನಕ್ಕಾಗಿ ಹಾತೊರೆಯುವಾಗ ಅನವಶ್ಯಕ ಶಕ್ತಿಹ್ರಾಸ, ಚಡಪಡಿಕೆ, ನಿದ್ರೆಗೆಡುವುದು, ಕೈಕಾಲು ನಡುಕ, ಎದೆ ಡವಗುಟ್ಟುವುದು, ನಿಟ್ಟುಸಿರು ಬಿಡುವುದು ಇತ್ಯಾದಿ ಕಾಡುತ್ತವೆ. ಇದರೊಡನೆ ಉನ್ಮಾದ, ಆತಂಕ ಅಲ್ಲದೆ ಕೆಲವೊಮ್ಮೆ ಭಯವೂ ಆಗಬಹುದು. ಈ ಅಸಹಾಯ ಸ್ಥಿತಿಗೆ ವಿರಹವೇದನೆ ಎಂಬ ಸುಂದರ ಹೆಸರಿದೆ. ವಿರಹ ವೇದನೆಗೆ ಏಕೈಕ ಉಪಾಯವೆಂದರೆ ಪ್ರೇಮಿಯ ಮೇಲೆ ಅವಲಂಬನೆ. ಹಾಗಾಗಿ ಪ್ರಣಯಿಗಳು ತಮ್ಮ ಅಸಹಾಯಕತೆಗಾಗಿ ಪ್ರೇಮಿಯನ್ನು ಅವಲಂಬಿಸುತ್ತಾರೆ. (ನೀನಿದ್ದರೆ ಎಲ್ಲವೂ ಇದೆ, ನೀನಿಲ್ಲದೆ ಜಗವೇ ಶೂನ್ಯ). ಪ್ರೇಮಿಯಿದ್ದರೆ ಪರಮಾನಂದ, ಇಲ್ಲದಿದ್ದರೆ ಕೋಲಾಹಲ!

ಮನಃಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ, ಪ್ರೇಮಿಯ ಮೇಲಿನ ಅತೀವ ಅವಲಂಬನೆಯು ಒಂದು ವಿಧದ ಗೀಳುರೋಗ– ಹೀಗೆನ್ನಲು ವೈಜ್ಞಾನಿಕ ಆಧಾರವಿದೆ! ಗೀಳುರೋಗ ಹಾಗೂ ಮಾದಕ ವಸ್ತುವಿನ ವ್ಯಸನಕ್ಕೆ ಒಳಗಾದವರ ಮೆದುಳಿನಲ್ಲಿ ಉಂಟಾಗುವ ಸೆರೋಟೋನಿನ್ ಎಂಬ (ಮುದ ನೀಡುವ) ರಾಸಾಯನಿಕದ ತೀವ್ರ ಕೊರತೆಯು ವಿರಹಕ್ಕೆ ತುತ್ತಾಗಿರುವ ಪ್ರೇಮಿಗಳಲ್ಲೂ ಕಂಡುಬರುತ್ತದೆ. ಪ್ರೇಮದ ಪರಾವಲಂಬನೆಯ ಗೀಳು ಮಾದಕ ವಸ್ತುವಿನ ವ್ಯಸನಕ್ಕೆ ಸಮವೆಂದು ಹೇಳುತ್ತಾಳೆ ಖ್ಯಾತ ಮಾನವ ಶಾಸ್ತ್ರಜ್ಞೆ ಹೆಲೆನ್ ಫಿಶರ್. ಮಾದಕ ವಸ್ತುವನ್ನು ಬಿಟ್ಟಿರಲಾರದ ಅಸಹಾಯಕತೆ, ಅದು ಸಿಗದಿದ್ದರೆ ತೀವ್ರ ಚಡಪಡಿಕೆ, ಅದರ ಹಂಬಲ ಕಡಿಮೆಯಾಗಲು ಅದೇ ಬೇಕು ಎನ್ನುವ ನಿರ್ದಿಷ್ಟ ಅನಿವಾರ್ಯತೆ, ಮತ್ತೆಲ್ಲಿ ಕೈತಪ್ಪೀತೋ ಎನ್ನುವ ಆತಂಕ – ಇಲ್ಲಿ ಮಾದಕ ವಸ್ತುವಿನ ಜಾಗವನ್ನು ಪ್ರೇಮಿಸುವ ವ್ಯಕ್ತಿ ಆಕ್ರಮಿಸಿಕೊಂಡಿದ್ದಾರಷ್ಟೆ!

ಇದನ್ನು ಲೂಸಿನ ಲೋಚನ ಜೋಡಿಗೆ ಅನ್ವಯಿಸಿದರೆ ಏನು ಕಂಡುಬರುತ್ತದೆ? ಅವರ ಪ್ರೇಮವಿವಾಹದ ಹಿಂದೆ, 'ನನ್ನ ಸುಖ ನಿನ್ನ ಜವಾಬ್ದಾರಿ' ಎನ್ನುವ ಅತಿಯಾದ ಅವಲಂಬನೆ ಹಾಗೂ ಮುಂದೆ ಸರಿಹೋಗಬಹುದು ಎಂದು ಕಡೆಗಣಿಸಿದ ದೋಷಗಳು – ಈ ಎರಡು ಕಾರಣಗಳಿಂದ ಇಬ್ಬರಲ್ಲೂ ಜಗಳ ಕಾಣಿಸಿಕೊಂಡಿದೆ. ಸುಖದಾಂಪತ್ಯಕ್ಕೆ ಪ್ರೀತಿಯೊಂದೇ ಸಾಲದು!

**ಸೂಚನೆ:** ಓದುಗರು ತಮ್ಮ ಸಮಸ್ಯೆಗಳಿಗೆ ಸಲಹೆ ಬಯಸಿದಲ್ಲಿ ಪತ್ರವನ್ನು ಬರೆಯಬಹುದು. ವಿಳಾಸ: ಸುಖೀ ದಾಂಪತ್ಯ ವಿಭಾಗ, ಸುಧಾ ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 01 ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: **www.medisex.org**